# ಕಾಮನ ಬಿಲ್ಲು

## A ವ್ಯತ್ಯಾಸ ಗುರುತಿಸಿ

1



2



## B ತಪ್ಪು ಕಂಡುಹಿಡಿಯಿರಿ

ಕಳೆದ ಭಾನುವಾರ ರೋಹಿತ್‌ನ ತಂದೆ ಕುಟುಂಬ ಸದಸ್ಯರೊಂದಿಗೆ ವನಭೋಜನಕ್ಕೆ ಹೋಗಿದ್ದರು. ಜೊತೆಗೆ ಒಂದು ಕ್ರೇಟ್ ತಂಪು ಪಾನೀಯದ ಬಾಟಲಿಗಳನ್ನು ಒಣ ಮಂಜುಗಡ್ಡೆ ತುಂಡುಗಳ ಮೇಲೆ ಇರಿಸಿಕೊಂಡು ಹೋಗಿದ್ದರು.

ನಂತರ ಜಾಗ ತಲುಪಿದ ಮೇಲೆ ಕಾರಿನ ಡಿಕ್ಕಿಯಿಂದ ತಿಂಡಿತಿನಿಸು, ನೀರಿನ ಕ್ಯಾನ್ ಹಾಗೂ ತಂಪು ಪಾನೀಯಗಳ ಬಾಟಲಿಗಳನ್ನು ರೋಹಿತ್ ತೆಗೆದಿರಿಸುವಾಗ, 'ಅಯ್ಯೋ ಎಲ್ಲ ಮಂಜುಗಡ್ಡೆ ತುಂಡುಗಳು ಕರಗಿ ನೀರಾಗಿಬಿಟ್ಟಿದೆ. ಬಹುಶಃ ತಿಂಡಿ ತಿನಿಸುಗಳೆಲ್ಲ ನೆನೆದಿರಬಹುದೇನೋ..' ಎಂದು ಕೂಗಿದ. ಈಗ ಹೇಳಿ, ರೋಹಿತ್ ಹೇಳಿದ್ದು ಸರೀನಾ?
ವೈಜ್ಞಾನಿಕವಾಗಿ ಯೋಚಿಸಿ.



## C ನಾನು ಯಾರು?

ಅವಳು ಇಡುವ ಮೊಟ್ಟೆಗಳನ್ನು ಜೋಪಾನ ಮಾಡುವುದೇ ನಾನು. ಸುಮಾರು 20-30 ಮೊಟ್ಟೆಗಳು ಕಾವಿಗೆ ಬರುವ ತನಕ ಅವುಗಳನ್ನು ನನ್ನ ಕಾಲುಗಳಿಗೆ ಅಂಟಿಸಿಕೊಂಡೇ ಇರುತ್ತೇನೆ. ಹಗಲು ಕಲ್ಲುಗಳ ಸಂದಿಯಲ್ಲಿ ಅಡಗಿ ಕುಳಿತುಕೊಳ್ಳುತ್ತೇನೆ, ರಾತ್ರಿಯಷ್ಟೇ ಸಂಚರಿಸುತ್ತೇನೆ. ಮೂರು ವಾರಗಳ ಬಳಿಕ ಕಾಲಿಗೆ ಅಂಟಿಸಿಕೊಂಡ ಮೊಟ್ಟೆಗಳನ್ನು ನೀರಿನಲ್ಲಿ ಬಿಡುತ್ತಿದ್ದಂತೆ ಬಾಲದ ಕಪ್ಪೆಮರಿಗಳು ಹುಟ್ಟುತ್ತವೆ.



### ಉತ್ತರಗಳು

**A.** ಚಿಮಣಿ, ಹೊಗೆ, ಮರ, ಬಲಗಡೆಯ ಕಿಟಕಿ, ಬಾಗಿಲು, ತಾರಸಿ,

**B.** ಒಣ ಮಂಜುಗಡ್ಡೆಯಲ್ಲಿ ಕಾರ್ಬನ್ ಡೈಆಕ್ಸೈಡ್ ಇರುತ್ತದೆ. ಇದು ಕರಗುವುದೂ ಇಲ್ಲ. ನೀರಾಗುವುದೂ ಇಲ್ಲ. ಬದಲಾಗಿ ಗ್ಯಾಸ್ ಆಗಿ ಮಾರ್ಪಾಟಾಗುತ್ತದೆ.

**C.** ಸೂಲಗಿತ್ತಿ ಕಪ್ಪೆ

*331 / © 2009 Amrita Bharati, Bharatiya Vidya Bhavan*